ಅಸಲು ದಾವೆ ನಂಃ 307/2022 ಡಿ ಡಬ್ಲ್ಯೂಃ 2- ಬಸವಣ್ಣೆವ್ವ ಕೋಂ ಈರಪ್ಪ ಹಕಾರಿ

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 25/07/2026 ರಂದು ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ 1 ನೇ ಪ್ರತಿವಾದಿಯವರ ಪರ ವಕೀಲರಾದ ಶ್ರೀ IMK ರವರಿಂದಃ**

ದಾವಾ ಆಸ್ತಿಯ ಸರ್ವೆ ನಂಬರ ಹೇಳಲು ಆಗುತ್ತದಾ ಎಂದು ಕೇಳಲಾದ ಪ್ರಶ್ನೆಗೆ ಸಾಕ್ಷಿಯು ಸರ್ವೆ ನಂ.23 ಆಗಿರುತ್ತದೆ ಎಂದು ನುಡಿದಿರುತ್ತಾರೆ. ನಮ್ಮ ಮನೆತನಕ್ಕೆ ಒಟ್ಟು 6 ಎಕರೆ 6 ಗುಂಟೆ ಜಮೀನು ಇರುತ್ತವೆ. ನಮ್ಮ ಮನೆತನಕ್ಕೆ 8 ಎಕರೆ ಜಮೀನು ಇರುತ್ತದೆ ಎಂದರೆ ಸಾಕ್ಷಿಯು ಇರಬಹುದು ಆದರೆ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. 1 ನೇ ಪ್ರತಿವಾದಿಯವರ ಗಂಡನಾದ ನಿಂಗಪ್ಪರವರು ನನಗೆ ಅಣ್ಣನಾಗಬೇಕು. ನಿಂಗಪ್ಪರವರು ಮಾರಾಟ ಮಾಡಿದ 2 ಎಕರೆ ಜಮೀನನ್ನು ಈ ದಾವೆಯಲ್ಲಿ ಸೇರಿಸಿರುತ್ತಾರಾ ಅಥವಾ ಇಲ್ಲವಾ ಎಂದು ನನಗೆ ಗೊತ್ತಿಲ್ಲ. 6 ಎಕರೆ 6 ಗುಂಟೆ ಜಮೀನಿನ ಚಕಬಂದಿ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಅನೂಸೂಚಿ -ಬಿ ಮನೆಯು ಕುರಹಟ್ಟಿಯಲ್ಲಿ ಇರುತ್ತದೆ. ದಾವಾ ಅನೂಸೂಚಿ - ಬಿ ಮನೆಯ ಸಂಖ್ಯೆ ನನಗೆ ಗೊತ್ತಿಲ್ಲ. ನನ್ನ ತಂದೆಯ ಹೆಸರು ಬಸಪ್ಪ. ನನ್ನ ಅಜ್ಜನ ಹೆಸರು ನಿಂಗಪ್ಪ ಎಂದರೆ ಸರಿ. ದಾವಾ ಆಸ್ತಿಗಳು ನನ್ನ ತಂದೆಯವರಿಗೆ ನಮ್ಮ ಅಜ್ಜನಿಂದ ಬಂದಿರುತ್ತದೆ. ಸಾಕ್ಷಿಯು ಮುಂದುವರೆದು ನನ್ನ ಅಜ್ಜ ಮತ್ತು ನನ್ನ ಅಮ್ಮನವರಿಗೆ ಮಕ್ಕಳು ಇರಲಿಲ್ಲ ಹಾಗಾಗಿ ನನ್ನ ತಂದೆಯವರು ನನ್ನ ಅಜ್ಜನವರಿಗೆ ದತ್ತಕ್ಕೆ ಹೋಗಿರುತ್ತಾರೆ. ಹಾಗಾಗಿ ದಾವಾ ಆಸ್ತಿಗಳು ದತ್ತಕ ತಂದೆಯಿಂದ ಬಂದಿರುತ್ತವೆ ಎಂದು ನುಡಿದಿರುತ್ತಾರೆ. ನನ್ನ ತಂದೆಯಾದ ಬಸಪ್ಪರವರ ಜನಕ ತಂದೆಯ ಹೆಸರು ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳು ನನ್ನ ತಂದೆಯವರಿಗೆ ಜನಕ ತಂದೆಯಿಂದ ಬಂದಿರುವುದಿಲ್ಲ ಎಂದರೆ ಸಾಕ್ಷಿಯು ಜನಕ ತಂದೆಯಿಂದ ಬಂದಿರುವುದಿಲ್ಲ, ದತ್ತಕ ತಂದೆಯವರಿಂದ ಬಂದಿರುತ್ತದೆ ಎಂದು ನುಡಿದಿರುತ್ತಾರೆ. ನಾನು ಶಾಲೆ ಕಲಿತಿರುವುದಿಲ್ಲ. ನನ್ನ ತಂದೆಯವರು ನಿಧನರಾದ ನಂತರ ನಾನು ಮತ್ತು ವಾದಿಯವರು ನನ್ನ ಅಣ್ಣನಾದ ನಿಂಗಪ್ಪರವರಿಗೆ ಡ ನಂ.4041 ರಂತೆ ದಿಃ 20.12.1989 ರಂದು ವರದಿ ಆಧಾರದ ಮೇಲೆ ಬಿಟ್ಟು ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ದಿಃ 20.12.1989 ರಂದು ಆದಂತಹ ಡ ನಂ.4041 ನ್ನು ನಾವು ಪ್ರಶ್ನೆ

ಮಾಡಿರುವುದಿಲ್ಲ. ಡ ನಂ.4041 ರ ಪ್ರಕಾರ ನನ್ನ ಅಣ್ಣನವರ ಹೆಸರು ದಾಖಲಾಗಿರುತ್ತದೆ ಎಂದರೆ ಸರಿ. ನನ್ನ ಅಣ್ಣನವರು ನಿಧನರಾಗುವವರೆಗೂ ನನ್ನ ಅಣ್ಣನವರ ಹೆಸರಿನಲ್ಲಿ ದಾವಾ ಆಸ್ತಿಗಳು ದಾಖಲು ಆಗಿದ್ದವು ಎಂದರೆ ಸರಿ. ನನ್ನ ಅಣ್ಣನವರ ಜೀವಿತಾವಧಿಯಲ್ಲಿ ನಾವು ಹಿಸ್ಸಾವನ್ನು ಕೇಳಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ಅಣ್ಣನವರ ಜೀವಿತಾವಧಿಯಲ್ಲಿ 1 ನೇ ಪ್ರತಿವಾದಿಯವರು ಅವರ ಹೆಸರಿಗೆ ದಾಖಲು ಮಾಡಿಕೊಂಡಿರುತ್ತಾರೆ, ಸದರಿ ಸಂಗತಿ ನಮಗೆ ನಂತರ ತಿಳಿದಿರುತ್ತದೆ ಎಂದು ನುಡಿದಿರುತ್ತಾರೆ. ನನ್ನ ಅಣ್ಣನವರಿಗೆ ನಾನು ಮತ್ತು ವಾದಿಯವರು ಡ ನಂ.4041 ರ ಪ್ರಕಾರ ವರದಿಯನ್ನು ಬರೆದುಕೊಟ್ಟು ದಾವಾ ಆಸ್ತಿಯ ಮೇಲಿನ ಹಕ್ಕನ್ನು ಬಿಟ್ಟುಕೊಟ್ಟಿದ್ದರು ಸಹ 1 ನೇ ಪ್ರತಿವಾದಿಯವರಿಗೆ ತೊಂದರೆ ಕೊಡುವ ಉದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಣ್ಣನವರು ಬದುಕಿದ್ದಾಗ ನಾನು ನಮ್ಮ ತವರು ಮನೆಗೆ ಹೋಗಿರುವುದಿಲ್ಲ. ನನ್ನ ಮದುವೆಯಾದ ಇಸ್ವಿ ನನಗೆ ನೆನಪಿಲ್ಲ. ನನ್ನ ಮದುವೆಯಾದ ನಂತರ ನಾನು ಒಂದು ಅಥವಾ ಎರಡು ಬಾರಿ ಮಾತ್ರ ನನ್ನ ತವರು ಮನೆಗೆ ಹೋಗಿರುತ್ತೇನೆ. ನನ್ನ ಅಣ್ಣ ನಮ್ಮನ್ನು ಪ್ರೀತಿ ವಿಶ್ವಾಸದಿಂದ ನೋಡಿಕೊಂಡಿರುತ್ತಾರೆ ಆದರೂ ಸಹ ನಾನು ತವರು ಮನೆಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಅಣ್ಣನವರು ಎರಡು ಎಕರೆ ಆಸ್ತಿಯನ್ನು ಮಾರಾಟ ಮಾಡಿದ ಹಣವನ್ನು ಪಡೆದುಕೊಂಡು ಹೋಗಿದ್ದರೂ ಸಹ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಣ್ಣನವರು ಹಣ ಬೇಡ ಜಮೀನನ್ನು ತೆಗೆದುಕೊಳ್ಳಿ ಎಂದು ಹೇಳಿದಾಗ ನಾನು ಜಮೀನು ಪಡೆದುಕೊಂಡರೇ ಮಾರಾಟ ಮಾಡುವುದು ತಡವಾಗುತ್ತದೆ ಹಾಗಾಗಿ ನೀನೇ ಮಾರಾಟ ಮಾಡಿ ಹಣವನ್ನು ಕೊಡಿ ಎಂದು ಕೇಳಿದಾಗ ನನ್ನ ಅಣ್ಣನವರು ಎರಡು ಎಕರೆ ಜಮೀನನ್ನು ಮಾರಾಟ ಮಾಡಿ ನನಗೆ ಮತ್ತು ವಾದಿಯವರಿಗೆ ಹಣವನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಎರಡು ಎಕರೆ ಜಮೀನನ್ನು ಫಕೀರವ್ವ ಕೊಳ್ಳಿರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಯವರು ಮತ್ತು ನಾನು ಮಿಲಾಪಿಯಾಗಿ ಫಕೀರವ್ವ ಕೊಳ್ಳಿರವರನ್ನು ಈ ದಾವೆಯಲ್ಲಿ ಪಕ್ಷಗಾರನ್ನಾಗಿ ಮಾಡಿದರೇ ನಿಜ ಸಂಗತಿ ಗೊತ್ತಾಗುತ್ತದೆ ಎಂದು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿಗಳನ್ನು ನನ್ನ ಅಣ್ಣ ಬದುಕಿದ್ದಾಗ ಅವರು ಸಾಗುವಳಿ ಮಾಡುತ್ತಿದ್ದರು ನಂತರ 1 ನೇ ಪ್ರತಿವಾದಿಯವರು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿ. ನನ್ನ ತಕರಾರಿನಲ್ಲಿ ಪ್ರತ್ಯೇಕ ಸ್ವಾಧೀನವನ್ನು ಕೊಡಿಸಬೇಕು ಎಂದು ಕೇಳಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯವರಿಗೆ ನನ್ನ ಅಣ್ಣನವರು ನೊಂದಣಿ ಹಕ್ಕು ಬಿಟ್ಟುಕೊಟ್ಟ ಪತ್ರವನ್ನು ಮಾಡಿರುವುದರಿಂದ ದಾವಾ ಆಸ್ತಿಗಳಿಗೆ 1 ನೇ ಪ್ರತಿವಾದಿಯವರೇ ಸಂಪೂರ್ಣ ಮಾಲೀಕರು ಆಗಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಉತಾರ 1 ನೇ ಪ್ರತಿವಾದಿಯವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ನನ್ನ ಎದುರು ಹಕ್ಕಿನಲ್ಲಿ ಹಕ್ಕು ಬಿಟ್ಟು ಕೊಟ್ಟ ಪತ್ರವನ್ನು ರದ್ದುಪಡಿಸುವಂತೆ ಕೇಳಿರುವುದಿಲ್ಲ ಎಂದರೆ ಸರಿ. ನಾನು ಡ ನಂ.4041 ನ್ನು ಎಲ್ಲಿಯೂ ಪ್ರಶ್ನೆ ಮಾಡಿರುವುದಿಲ್ಲ ಹಾಗಾಗಿ ಅದು ನನಗೆ ಬಂಧನಕಾರಿಯಾಗಿರುತ್ತದೆ ಎಂದರೆ ಸರಿಯಲ್ಲ. ಡ ನಂ.4041 ನ್ನು ಮೂರು ವರ್ಷಗಳಲ್ಲಿ ಪ್ರಶ್ನೆ ಮಾಡದೇ ಇರುವುದರಿಂದ ನನಗೆ ಮತ್ತು ವಾದಿಯವರಿಗೆ ದಾವಾ ಆಸ್ತಿಗಳಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ನನ್ನ ಸಾಕ್ಷಿ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ವಿಜಯಕುಮಾರ ಎನ್)**

ಹೆಚ್ಚುವರಿ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ

ನ್ಯಾಯಾಧೀಶರು ರೋಣ.